MR. SPEAKER.— Petition presented the petition stands referred to the Committee on Petitions.

ನಿಯಮ ೩೩೪ ರ ಮೇರೆಗೆ.

ವಿದ್ಯಾ ಇಲಾಖೆಯಲ್ಲಿ ಹಂಗಾಮಿನೌಕರರಾಗಿ ಕೆಲಸ ಮಾಡುತ್ತಿರುವ ೯೦೦ ಜನ ಲೆಕ್ಚರರ್ಸ್‌ಗಳ ಪರಿಸ್ಥಿತಿಯ ಬಗ್ಗೆ

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ಮುಖ್ಯವಾದ ವಿಷಯ ಉಪಾಧ್ಯಾಯರ ಬಗ್ಗೆ ಇದೆ. ಮಾನ್ಯ ಮಂತ್ರಿಗಳು ಸಹ ಎದುರುಗಡೆ ಕುಳಿತಿದ್ದಾರೆ. ತಮ್ಮ ಗಮನ ಸೆಳೆಯುವುದ ಕ್ಕೋಸ್ಕರ ಒಂದು ಪ್ರಶ್ನೆಯನ್ನು ಎತ್ತಬೇಕಾಗಿದೆ. ತಾವು ಒಂದು ಆಜ್ಞೆಯನ್ನು ಏನು ಹೊರಡಿಸಿ ದ್ದೀರಿ, ಅದು ಪತ್ರಿಕೆಯಲ್ಲಿ ಬಂದಿದೆ. ಅದರ ಪ್ರಕಾರ ಡಿಎಲ್‌ಆರ್‌ಸಿಗಳನ್ನು ರದ್ದು ಮಾಡಗಿದೆ ಯೆಂದು ತಿಳಿದುಬಂದಿದೆ. ರದ್ದು ಮಾಡುವುದಕ್ಕೆ ಕಾರಣ, ಈ ಡಿ. ಎಲ್.ಆರ್.ಸಿ. ಗಳಲ್ಲಿ ಅವ್ಯವಹಾರ ನಡೆಯುತ್ತಿದೆ, ಲಂಚಗುಳಿತನದಿಂದ ಇದರಲ್ಲಿನ ಸದಸ್ಯರು ಬೇಕಾದಷ್ಟು ಹಣ ತೆಗೆದುಕೊಂಡು ಹೋಗುವುದಕ್ಕೆ ಪ್ರಯತ್ನ ಪಟ್ಟಿದ್ದಾರೆ, ಈ ದೋಷಾರೋಪಣೆಗಳು ಬಂದಿದ್ದರಿಂದ ಇವುಗಳನ್ನು ರದ್ದು ಮಾಡಿ ಆಜ್ಞೆ ಹೊರಡಿಸಲಾಗಿದೆ.

ಅಧ್ಯಕ್ಷರು.— ನೀವು ಕಳಿಸಿರುವದು ಜೂನಿಯರ್ ಕಾಲೇಜು ಅಧ್ಯಾಪಕರ ವಿಚಾರದ ಬಗ್ಗೆ.

ಶ್ರೀ ಎಂ. ಎಸ್. ಕೃಷ್ಣನ್.— ದಯವಿಟ್ಟು ಕ್ಷಮಿಸಬೇಕು. ನಾನು ಎರಡೂ ವಿಷಯು ಗಳನ್ನು ಕಳಿಹಿಸಿದ್ದೆ. ಜೂನಿಯರ್ ಕಾಲೇಜ್ ಲೆಕ್ಚರರ್ಸ್ ವಿಷಯು ಬಹಳ ಗಂಭೀರವಾದುದ್ದಾಗಿದೆ. ಸುಮಾರು ಒಂಭೈನೂರು ಜೂನಿಯರ್ ಕಾಲೇಜ್ ಲೆಕ್ಚರರ್ಸ್ ನಮ್ಮ ರಾಜ್ಯದಲ್ಲಿ ಇದ್ದಾರೆ. ಅವರು ಆರು, ಏಳು ಎಂಟು ವರ್ಷಗಳಿಂದ ಈ ಉದ್ಯೋಗ ಮಾಡುತ್ತಿದ್ದಾರೆ. ಇವರುಗಳನ್ನು ಸ್ಥಳೀಯ ಅಭ್ಯರ್ಥಿಗಳೆಂದು ಪರಿಗಣಿಸಲಾಗಿದೆ. ಅವರನ್ನು ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್ ಮೂಲಕ ಇಂಟರ್‌ವ್ಯೂ ಮಾಡಿಯೇ ತೆಗೆದುಕೊಂಡಿರುವುದು. ಈಗ ಇವರನ್ನು ಕೈಬಿಟ್ಟು ಆ ಜಾಗಕ್ಕೆ ಪ್ರೊಮೋಷನ್ ವೇಕೆನ್ಸಿಯಲ್ಲಿ ಬೇರೆಯವರನ್ನು ಗೆದುಕೊಳ್ಳಬೇಕೆಂದು ಹೊರಟಿದ್ದಾರೆ. ಇವರನ್ನು ಖಾಯಂ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಏಕೆಂದರೆ ಇವರಿಗೆ ವಿದ್ಯಾಭ್ಯಾಸ ಇದೆ, ಪರಿ ಶ್ರಮ ಪಟ್ಟಿದ್ದಾರೆ. ಮಾನ್ಯ ಸಚಿವರು ಇದರ ಬಗ್ಗೆ ಹೇಳಿಕೆ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಬಿ. ರಾಚಯ್ಯ (ಶಿಕ್ಷಣ ಸಚಿವರು).— ಜೂನಿಯರ್ ಕಾಲೇಜಿಗೆ ಲೆಕ್ಚರರ್‌ಗಳನ್ನು ನೇರವಾಗಿ ತೆಗೆದುಕೊಳ್ಳುವುದಕ್ಕೆ ಪಿ.ಎಸ್.ಸಿ. ಇಂಟರ್‌ವ್ಯೂಗೆ ಕರೆಯುತ್ತಾರೆ. ಇದರಲ್ಲಿ ಇವರೂ ಕೂಡ ಅರ್ಜಿ ಹಾಕಿಕೊಳ್ಳಬಹುದಾಗಿತ್ತು. ಎರಡನೇಯದಾಗಿ ಪ್ರೋಮೋಷನಲ್ ವೆಕೆನ್ಸಿಯನ್ನು ರಿಕ್ರೂಟ್‌ಮೆಂಟ್ ರೂಲ್ಸ್ ಪ್ರಕಾರ ಯಾರು ಕೆಲಸ ಮಾಡುತ್ತಿದ್ದಾರೆ, ಅವರಿಗೆ ಕೊಡಬೇಕಾಗಿ ಬರು ತ್ತದೆ. ಇದಕ್ಕೆ ಯಾರು ಹಂಗಾಮಿಯಾಗಿ ಕೆಲಸ ಮಾಡುತ್ತಿದ್ದಾರೆ ಅವರನ್ನು ಆಯ್ಕೆ ಮಾಡುವು ದಕ್ಕೆ ಬರುವುದಿಲ್ಲ. ಇದರ ಬಗ್ಗೆ ಹೈಕೋರ್ಟಿನಲ್ಲಿ ಆ ದೇಶವನ್ನು ಕೊಟ್ಟಿದ್ದಾರೆ. ಒಂದು ಸಮಿತಿ ಯನ್ನು ಪ್ರಕಟಣೆ ಮಾಡಿ ಅದಕ್ಕೆ ಅರ್ಜಿಗಳನ್ನು ಕರೆದು ಅವರನ್ನು ಆಯ್ಕೆ ಮಾಡಬೇಕಂ. ಕೆಲವ ರನ್ನು ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್ ಮೂಲಕ ತೆಗೆದುಕೊಂಡು ನೇಮಕ ಮಾಡಿದರೆ ಅದು ಸರಿ ಹೋಗುವುದಿಲ್ಲ. ಡಿ.ಎಲ್.ಆರ್‌ಸಿ. ಮಾಡುವುದಕ್ಕೆ ಆದೇಶ ಕೊಟ್ಟಿದ್ದಾರೆ. ಈ ದೃಷ್ಟಿಯಿಂದ ಯಾರಾದರೂ ಪ್ರೋಮೊಷನಲ್ ವೆಕೆನ್ಸಿಯಲ್ಲಿ ಕೆಲಸ ಮಾಡುತ್ತಿದ್ದರೆ ಅವರನ್ನು ನೇರವಾಗಿ ನೇಮಕ ಮಾಡುವುದಕ್ಕೆ ಬರುವುದಿಲ್ಲ, ನೇರವಾಗಿ ಅಪಾಯಿಂಟ್ ಮೆಂಟ್ ಮಾಡುವ ಕೆಲಸವನ್ನು ಪಿ.ಎಸ್. ಸಿ. ಮಾಡಬೇಕಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಅವರು ಆರೇಳು ವರ್ಷಗಳಿಂದಲೂ ಕೆಲಸ ಮಾಡುತ್ತಿದ್ದಾರೆ ಸ್ವಾಮಿ.

ಶ್ರೀ ಬಿ. ರಾಚಯ್ಯ.—ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್ ಪ್ರಕಾರ ಅರ್ಜಿ ಕರೆದಿ ದ್ದಾರೆ. ಪಿ.ಎಸ್.ಸಿ. ಯವರು ಇಂಟರ್‌ವ್ಯೂ ಮಾಡುತ್ತಿದ್ದಾರೆ. ಅವರ ಮುಖಾಂತರ ಬರ

ಬೇಕೇವಿನಹ ನೇರವಾಗಿ ಇವರನ್ನು ಆಯ್ಕೆಮಾಡುವುದಕ್ಕೆ ಬರುವುದಿಲ್ಲ. ರಿಕ್ರೂಟ್‌ಮೆಂಟ್ ರೂಲ್ಸ್ ಪ್ರಕಾರ ಕ್ರಮ ತೆಗೆದುಕೊಂಡಿದ್ದಾರೆ. ಅದರ ಪ್ರಕಾರ ಆಯ್ಕೆಯಾದರೆ ಕೆಲಸ ಕೊಡಬೇಕಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ.....

MR. SPEAKER.— I will not allow clarification or discussion under Rule 334.

(ii) ರೇಷ್ಮೆ ಇಲಾಖೆಯಲ್ಲಿ ಹಂಗಾಮಿಯಾಗಿ ಕೆಲಸ ಮಾಡುತ್ತಿರುವ ನೌಕರರ ಬಗ್ಗೆ

ಶ್ರೀ ವೈ.ಕೆ. ರಾಮಯ್ಯ.—ಸನ್ಮಾನ್ಯ ಅಧ್ಯಕ್ಷರೇ, ಈ ರೇಷ್ಮೆ ಇಲಾಖೆಯಲ್ಲಿ ಹತ್ತು ಸಾವಿರ ಜನ ಇದ್ದು ಅವರಲ್ಲಿ ಕೆಲವರು ದಿನಗೂಲಿಗಳಾಗಿ, ಹಂಗಾಮಿಯಾಗಿ ನೌಕರಿಯ ವಿವಿಧ ಹಂತದಲ್ಲಿ ಕೆಲಸ ಮಾಡುತ್ತಿದ್ದಾರೆ. ಕೆಲವು ಮೊಟ್ಟೆಗಳನ್ನು ಪರೀಕ್ಷೆ ಮಾಡುವ, ಚಿಟ್ಟೆ ಪರೀಕ್ಷೆ ಮಾಡುವವರು ಸೇರಿ ಹತ್ತು ಸಾವಿರ ಜನ ನಿನ್ನೆಯಿಂದ ಧರಣಿ ಸತ್ಯಾಗ್ರಹ, ಉಪವಾಸ ಮಾಡುತ್ತಿದ್ದಾರೆ ಪಿ.ಡಬ್ಲ್ಯೂ.ಡಿ ಇಲಾಖೆಯಲ್ಲಿ ದಿನಗೂಲಿ ನೌಕರರು ಸತ್ಯಾಗ್ರಹ ಮಾಡಿದರೆ ರಸ್ತೆ ಕೆಲಸ ನಿಲ್ಲಿಸಬಹುದು. ಆದರೆ ಈ ಉದ್ಯಮದ ವಿಷಯ ಹಾಗಲ್ಲ. ಹುಳಕ್ಕೆ ಸೊಪ್ಪು ಹಾಕದೇ ಇದ್ದರೆ ಬೆಳೆ ಹಾಳಾಗಿ ಹೋಗುತ್ತದೆ, ಇವರೆಲ್ಲರ ಹುದ್ದೆಗಳನ್ನು ಖಾಯಂ ಆಗಿ ಆಗ ಮಾಡಬೇಕು. ಹತ್ತು ಸಾವಿರ ಜನರು ಕೇಳುವ ಪ್ರಶ್ನೆ ಇಷ್ಟೆ. ನನಗೆ ಮಾನ್ಯ ಮಂತ್ರಿಗಳಿಂದ ಉತ್ತರ ಬಂದಿದೆ, ಇದರ ಬಗ್ಗೆ ಸಂಪುಟದ ಸಮಿತಿ ರಚಿಸಲಾಗಿದ್ದು ಅದರ ವರದಿ ಬಂದ ಮೇಲೆ ಈ ವಿಷಯದ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇನೆ ಎಂದು ಹೇಳಲಾಗಿದೆ. ಅವರು ಕೇಳುತ್ತಿರುವುದು ಏನೆಂದರೆ ಪಿಡಬ್ಲ್ಯೂಡಿ ನೌಕರರ ತೊಂದರೆಗಳನ್ನು ಪರಿಶೀಲಿಸಲಿಕ್ಕೆ ಸಂಪುಟ ಸಮಿತಿಯ ವರದಿ ಬೇಕಾಗಿರಲಿಲ್ಲ, ಆದರೆ ನಮಗೆ ಮಾತ್ರ ಈ ವರದಿ ಏಕೆ ಬೇಕು ? ಪಿಡಬ್ಲ್ಯೂಡಿಯಲ್ಲಿ ಸಾವಿರಾರು ಜನರನ್ನು ಸಂಪುಟದ ವರದಿ ಬರದೇ ಇದ್ದರೂ ಖಾಯಂ ಮಾಡಿದ್ದಾರೆ. ಆದ್ದರಿಂದ ಇವರು ಮುಷ್ಕರ ನಿಲ್ಲಿಸುವ ಹಾಗೆ ಮಾನ್ಯ ಮಂತ್ರಿಗಳು ಏನಾದರೂ ತಕ್ಷಣ ವಿಚಾರಿಸು ಮಾಡಬೇಕು. ಇದರ ಬಗ್ಗೆ ಏನು ಕ್ರಮ. ತೆಗೆದುಕೊಳ್ಳುತ್ತಾರೆಂದು ಸರ್ಕಾರದಿಂದ ಹೇಳಿಕೆಯನ್ನು ಬಯಸುತ್ತೇನೆ.

ಶ್ರೀಮತಿ ಚಂದ್ರಪ್ರಭಾ ಅರಸ್ (ಸಮಾಜ ಕಲ್ಯಾಣ ಮತ್ತು ರೇಷ್ಮೆ).—ಮಾನ್ಯ ಅಧ್ಯಕ್ಷರೇ. ಇದರ ಬಗ್ಗೆ ನಾನು ಅನೇಕ ಸಾರಿ ಉತ್ತರ ಕೊಟ್ಟಿದ್ದೇನೆ. ಇವರಲ್ಲಿ ಏಳು ಸಾವಿರದ ಮೇಲೆ ನೂರು— ಆರುನೂರು ಕೆಲಸಗಾರರು ಐದಾರು ವರ್ಷಗಳಿಂದ ಹಂಗಾಮಿಯಾಗಿ ಕೆಲಸ ಮಾಡಿಕೊಂಡು ಬಂದಿದ್ದಾರೆ. ಇವರಲ್ಲಿ ಕೆಲವರು ನಾನ್‌ಸ್ಕಿಲ್ಡ್ ಅಥವಾ ಸ್ಕಿಲ್ಡ್ ಚಟ್ಟಿ ಪರೀಕ್ಷಕರಾಗಲೀ, ಮೊಟ್ಟೆ ಪರೀಕ್ಷಕರಾಗಲೀ ಕ್ಯಾಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್ ಪರಿಪಾಲನೆ ಮಾಡಿ ತೆಗೆದುಕೊಳ್ಳಬೇಕೆಂದು ಆಗಿದೆ, ಇಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ನಾನ್‌ಸ್ಕಿಲ್ಡ್ ಲೇಬರರ್ಸ್ ಏನು ಇದ್ದಾರೆ, ಹಂಗಾಮಿ ಕೆಲಸಗಾರರು ಏನು ಇದ್ದಾರೆ. ಮಾನ್ಯ ಸದಸ್ಯರಾದ ಶ್ರೀ ವೈ.ಕೆ. ರಾಮಯ್ಯ ಅವರಿಗೆ ಗೊತ್ತಿರುವ ಹಾಗೆ ಸ್ಕಿಲ್ಡ್ ಲೇಬರರ್ಸ್‌ಗಳಲ್ಲಿ ಪದವೀಧರರು ಇದ್ದಾರೆ. ಎಸ್.ಎಸ್.ಎಲ್.ಸಿ ಮಾಡಿದವರೂ, ಮಾಡದೇ ಇರುವವರು ಇದ್ದಾರೆ. ಇವರ ಆಯ್ಕೆ ನಿಯಮಾವಳಿಗೆ ಒಳಪಟ್ಟಿಲ್ಲ. ಈಗ ಕೆಲವು ನಿಯಮಾವಳಿಗಳನ್ನು ಹಿದ್ದುಪಡಿ ಮಾಡಿ ಅವರನ್ನು ಬೇರೆ ಬೇರೆ ವಿಭಾಗವಾಗಿ ವಿಭಾಗಿಸಿ ಅವರು ಎಷ್ಟು ವರ್ಷ ಕೆಲಸ ಮಾಡಿದ್ದಾರೆ, ಅವರ ವಿದ್ಯಾರ್ಹತೆ ಏನಿದೆ ಎಂಬುದನ್ನು ಪ್ರತಿಯೊಂದನ್ನು ಪರಿಗಣನೆಗೆ ತೆಗೆದುಕೊಂಡು ಆದಷ್ಟು ಶೀಘ್ರವಾಗಿ ಅವರ ಸೇವೆಯನ್ನು ಖಾಯಂ ಮಾಡಬೇಕೆಂದು ಆಗಿದೆ. ಇದಕ್ಕೆ ಸಮಯಾವಕಾಶ ಬೇಕಾಗುತ್ತದೆ. ಎನ್.ಎಂ.ಆರ್.ನಲ್ಲಿ ನಾನ್‌ಸ್ಕಿಲ್ಡ್ ಲೇಬರರ್ಸ್ ಪ್ರಶ್ನೆ ಬೇರೆ, ಸ್ಕಿಲ್ಡ್ ಲೇಬರರ್ಸ್ ಯಾರು ಇದ್ದಾರೆ, ಅವರ ಬಗ್ಗೆ ಕೆಲವು ಕಾನೂನು ತಿದ್ದುಪಡಿಯಾಗಬೇಕು. ಸಚಿವ ಸಂಪುಟದ ಗಮನಕ್ಕೆ ಈ ವಿಷಯವನ್ನು ತಂದು ಆದಷ್ಟು ಜಾಗ್ರತೆಯಾಗಿ ಅವರ ಸೇವೆ ಖಾಯಂ ಆಗುವ ಹಾಗೆ ಮಾಡುತ್ತೇನೆ ಎಂದು ತಮ್ಮ ಮೂಲಕ ತಿಳಿಸುವುದಕ್ಕೆ ಬಯಸುತ್ತೇನೆ. ಜೊತೆಗೆ ಇವರು ಸಾಮಾನ್ಯ ರೈತರಿಗೆ ತೊಂದರೆಯಾಗದ ಹಾಗೆ ಸರ್ಕಾರದ ಜತೆಯಲ್ಲಿ ಸಹಕರಿಸಬೇಕು. ಅದು ಬಿಟ್ಟು ಹೀಗೆ ಚಳುವಳಿ ಹೂಡುವುದರ ಮೂಲಕ ಒತ್ತಾಯ ತಂದರೆ ಅದರ ಪರಿಣಾಮ ಬೇರೆಯಾಗುತ್ತದೆ. ಕಾನೂನು ಪ್ರಕಾರ ಇದನ್ನು ವ್ಯವಸ್ಥೆ ಮಾಡಬೇಕಾಗುತ್ತದೆ.